
ಅಂದಹಾಗೆ, ಈ ಮೇಲೆ ಹೇಳಿದ ಯಾವುದೇ ಸೂತ್ರಗಳ ಪರಿಗಣನೆಯಿಲ್ಲದೇ, ವಸ್ತುವಿನ ಮೌಲ್ಯವನ್ನು ನಿರ್ಣಯಿಸುವ ಪ್ರಮುಖ ಅಂಶವೊಂದಿದೆ. ಅದನ್ನು 'ತುಷ್ಟಿಗುಣ'ವೆನ್ನುತ್ತಾರೆ. ಅಂದರೆ ವಸ್ತುವೊಂದು ತನ್ನೆಲ್ಲಾ ಗುಣಗಳನ್ನು ಬಳಸಿಕೊಂಡು ಜನರ ಬಯಕೆಯನ್ನು ಎಷ್ಟರಮಟ್ಟಿಗೆ ತೃಷ್ಟಿಪಡಿಸಲು ಸಾಧ್ಯ ಎನ್ನುವುದರ ಮೇಲೆ ಅದರ ದರ ನಿರ್ಧರಿತವಾಗುತ್ತದೆ. ಹೀಗಾಗಿಯೇ ಮದ್ಯ–ಸಿಗರೇಟುಗಳ ತಯಾರಿಕಾ ವೆಚ್ಚಕ್ಕೂ ಅವುಗಳ ಮಾರುಕಟ್ಟೆಯ ಬೆಲೆಗೂ ಯಾವುದೇ ಸಂಬಂಧವಿರುವುದಿಲ್ಲ. ಮೇಲ್ನೋಟಕ್ಕೆ ಒಂದೇ ಒಳವಸ್ತು, ಗಾತ್ರದ್ದೆನಿಸುವ ಟೂತ್‌ಪೇಸ್ಟಿಗೂ ಸೌಂದರ್ಯ ವರ್ಧಕ ಲೋಶನ್ನಿಗೂ ದರದಲ್ಲಿ ಅಜಗಜಾಂತರವಿರುತ್ತದೆ. ಕೆಲವೇ ಗಂಟೆಗಳ ಕಾಲ ಪರಿಣಾಮ ಬೀರಬಲ್ಲ ಸುಗಂಧ ದ್ರವ್ಯವೂ ಲಕ್ಷಾಂತರ ಬೆಲೆಬಾಳುತ್ತದೆ.

ಇವನ್ನೆಲ್ಲ ನೋಡಿದಾಗ, ಮೌಲ್ಯವೆನ್ನುವುದು ವಸ್ತುನಿಷ್ಠವೇ ಅಥವಾ ವ್ಯಕ್ತಿನಿಷ್ಠವೇ? ಅಥವಾ ಅವೆರಡರ ಸಮ್ಮಿಳನದಲ್ಲಿ ರೂಪು ಪಡೆಯುವಂಥದ್ದೇ? ಎನ್ನುವ ಸಂದೇಹ ಮೂಡಿದರೆ ಆಶ್ಚರ್ಯವೇನಿಲ್ಲ.

***

ವಸ್ತುವಿನ ಮೌಲ್ಯದ ಕುರಿತು ಆಡಮ್ ಸ್ಮಿತ್‌ನ ಆದಿಯಾಗಿ ಹಲವು ದಿಗ್ಗಜರು ನಾನಾ ತೆರನಾಗಿ ಈಗಾಗಲೇ ಪ್ರತಿಪಾದಿಸಿಯಾಗಿದೆ. ಅದರಲ್ಲಿ ಹೊಸತೇನೂ ಇಲ್ಲ. ಪ್ರಶ್ನೆಯೇನೆಂದರೆ, ಉಚ್ಛ್ರಾಯ ಸ್ಥಿತಿಯಲ್ಲಿರುವ ಇಂದಿನ ಬಂಡವಾಳಶಾಹಿ ಮಾರುಕಟ್ಟೆಯಲ್ಲಿ ಈ ಎಲ್ಲ ಅರ್ಥಶಾಸ್ತ್ರದ ಲೆಕ್ಕಾಚಾರಗಳಿಗೆ ಮನ್ನಣೆಯಿದೆಯೇ? ಮನುಷ್ಯನಲ್ಲಿ ಕೊಳ್ಳುಬಾಕುತನವನ್ನು ಉದ್ದೀಪಿಸಿ ಉತ್ಪನ್ನವೊಂದಕ್ಕೆ ಮಾರುಕಟ್ಟೆ ಸೃಷ್ಟಿಸುವ ಪರಿಯನ್ನು; ಬೇಡಿಕೆ, ಅಗತ್ಯ, ಅನಿವಾರ್ಯ ಅಥವಾ ಐಷಾರಾಮ – ಹೀಗೆ ಯಾವುದೇ ಅನುಮೋದಿತ ವಿಭಾಗಕ್ಕೂ ಸೇರಿಸಲಾಗುವುದಿಲ್ಲವಲ್ಲ? ದಾಸ್ತಾನುಗಳ ಅಕ್ರಮ ಸಂಗ್ರಹ ಮಾಡಿ ಕೃತಕ ಅಭಾವ ಸೃಷ್ಟಿಸುವ ಹಳೆಯ ಹುನ್ನಾರಗಳನ್ನು ಬದಿಗಿಡಿ; ಉದ್ಯಮಿಯೊಬ್ಬ ಹಣದ ಹೊಳೆ ಹರಿಸಿ ಇಡೀ ಒಂದು ಕ್ಷೇತ್ರವನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡು, ಮಾರುಕಟ್ಟೆಯಲ್ಲಿ ಏಕಸಾಮ್ಯ ಸಾಧಿಸಿ ಆ ಕ್ಷೇತ್ರದ ಎಲ್ಲ ವಸ್ತುಗಳ ಬೆಲೆಯನ್ನು ತಾನೊಬ್ಬನೇ ನಿಯಂತ್ರಿಸಬಹುದಾದ ಸಾಧ್ಯತೆಗೆ ಮೂಲಮಂತ್ರವೆಲ್ಲಿಯದು? ವಸ್ತುವಿನ ಮೌಲ್ಯ ಹಾಗೂ ಅದರ ಬೆಲೆಯ ನಡುವೆ ಕನಿಷ್ಠ ಸಂಬಂಧವನ್ನಾದರೂ ಅಪೇಕ್ಷಿಸಬಹುದೇ ಆಗ? ಅಂಗಡಿಯಲ್ಲಿ ಸಾಮಾನುಗಳನ್ನು ಕೊಂಡು ತಂದು ಮನೆಯಲ್ಲಿ ಅಡುಗೆ ಮಾಡಿ ಉಣ್ಣುವುದಕ್ಕಿಂತ, 'ಮೆಕ್‌ಡೊನಾಲ್ಡ್ಸ್'ನಲ್ಲಿ ತಿನ್ನುವುದೇ ಸೋವಿಯಾಗಬಹುದಾದ ಲೆಕ್ಕಾಚಾರ ಬಹುಶಃ ಆಡಮ್ ಸ್ಮಿತ್‌ನಿಗೆ ಹೊಳೆದಿರಲಿಕ್ಕಿಲ್ಲ. (ಇದು ಸದ್ಯಕ್ಕೆ ಅಮೆರಿಕದ ಉದಾಹರಣೆಯಷ್ಟೇ. ಮುಂದೊಂದು ದಿನ ಅದು ಭಾರತಕ್ಕೂ ಅನ್ವಯವಾಗುವ ಸಾಧ್ಯತೆಯನ್ನು ನಾವು ಕಡೆಗಣಿಸುವಂತಿಲ್ಲ).

ಇವೆಲ್ಲ ಕೇವಲ ವಸ್ತುವಿನ ಮೌಲ್ಯಕ್ಕೆ ಮಾತ್ರ ಅನ್ವಯಿಸುವ ಸಂಗತಿಯಲ್ಲ. ಆಧುನಿಕೋತ್ತರ ಕಾಲಘಟ್ಟದಲ್ಲಿ 'ಶ್ರಮ'ದ ಮೌಲ್ಯ ಕೂಡಾ ಯಾವುದೇ ತತ್ವ–ಥಿಯರಿಯ ಬಾಬ್ತಿಗೆ ಸಿಗದಷ್ಟು ಕ್ಲಿಷ್ಟಕರವಾಗಿದೆ. ಕಾರ್ಲ್ ಮಾರ್ಕ್ಸ್, ಫ್ರೆಡೆರಿಕ್ ಎಂಗಲ್ಸ್‌ನಂತವರು ಈ ಶ್ರಮದ ಬೆಲೆಯ ಕುರಿತು ಸಾಕಷ್ಟು ಅಧ್ಯಯನ ನಡೆಸಿದ್ದರೂ, ಈ ಯುಗದ ಶ್ರಮ ವೈವಿಧ್ಯದ ಪರಿಕಲ್ಪನೆ ಆ ಕಾಲದಲ್ಲಿರಲಿಲ್ಲ ಎಂಬುದು ಇವತ್ತಿಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ.



ಎಲ್ಲವೂ ಸರಿ. ಮಾನವೀಯ ಮೌಲ್ಯ ಆದರ್ಶಗಳ ಗತಿಯೇನು? ವಸ್ತು ಹಾಗೂ ಶ್ರಮದ ಮೌಲ್ಯ ನಿರ್ಧರಿಸುವ ಮಾನದಂಡಗಳನ್ನು ಇಲ್ಲಿಯೂ ಸ್ಥೂಲವಾಗಿ ಅಳವಡಿಸಿಕೊಳ್ಳಬಹುದೇ? ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮುಂತಾದ ಕ್ಷೇತ್ರಗಳ ಮೌಲ್ಯ ಗುರುತಿಸುವಿಕೆಯ ವಿಧಾನ ದಿನಗಳೆದಂತೆ ಪಲ್ಲಟಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ, ಈ ಪ್ರಶ್ನೆಗೆ ಉತ್ತರ ಕಷ್ಟವೆನಿಸುತ್ತದೆ.

●